Dispatched to All Schools & D.D.P.I and B.E.O,

ಕರ್ನಾಟಕ ಸರ್ಕಾರ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಕೆ.ಆರ್.ವೃತ್ತ,ನೃಪತುಂಗ ರಸ್ತೆ, ಬೆಂಗಳೂರು.-1

ಕಡತ ಸಂಖ್ಯೆ: ಎಂ.ಸಿ.4.ಸಿ.ಪಿ.ಐ.ಬಿ.ಎಂ.20ಮ.ಅಲ್ಪ.ಸಂ.ಘೋ/2015-16 ದಿನಾಂಕ:07.10.2015

DESPATCH
17-10-15

"ಜ್ಞಾಪನ"

ವಿಷಯ: ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ:ಇಡಿ27 ಮಾಹಿತಿ 2012(ಭಾಗ-1) ದಿನಾಂಕ:18.06.2014.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ ಈ ಕೆಳಕಂಡ ಶಾಲೆಗಳ ಆಡಳಿತ ಮಂಡಳಿಯವರ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸಿರುತ್ತಾರೆ. ಅದರಂತೆ ದಿನಾಂಕ: 06.10.2015ರಂದು ನಡೆದ ಭಾಷಾ/ಮತೀಯ ಅಲ್ಪಸಂಖ್ಯಾತ ಘೋಷಣಾ ಪರಿಶೀಲನಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಶಾಲೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸದರಿ ಶಾಲೆಗಳ ಆಡಳಿತ ಮಂಡಳಿಯವರು ಸರ್ಕಾರಿ ಆದೇಶದನ್ವಯ ಭಾಷಾ/ಮತೀಯ ಅಲ್ಪಸಂಖ್ಯಾತ ಘೋಷಣೆಯ ಮಾನದಂಡಗಳನ್ವಯ ಎಲ್ಲಾ ಪೂರಕ ದಾಖಲೆಗಳನ್ನು ಒದಗಿಸಿರುವುದರಿಂದ ಘೋಷಣಾ ಸಮಿತಿಯು ಈ ಕೆಳಕಂಡ ಅನುದಾನ ರಹಿತ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ.

| ಕ್ರ. ಸಂ. | ಆಡಳಿತ ಮಂಡಳಿಯ ಹೆಸರು | ಶಾಲೆಯ ವಿಳಾಸ | ಪಠ್ಯಕ್ರಮ | ಮತೀಯ ಮುಸ್ಲಿಂ/ಕ್ರಿಶ್ಚಿಯನ್ |
|---|---|---|---|---|
| 1 | ನ್ಯಾಷನಲ್ ವುಮೆನ್ಸ್ ಮೈನಾರಿಟಿ ಎಜುಕೇಷನಲ್ ಸೊಸೈಟಿ(ರಿ), ಹೊಸ ಸಂತೆ ಮೈದಾನ ರಸ್ತೆ, ಹೊರಪೇಟೆ, ಚಿತ್ರದುರ್ಗ. | ನ್ಯಾಷನಲ್ ಪಬ್ಲಿಕ್ ಸ್ಕೂಲ್ ಮತ್ತು ನ್ಯಾಷನಲ್ ಆಂಗ್ಲ ಮಾಧ್ಯಮಾ ಪ್ರೌಢಶಾಲೆ, ಹೊಸ ಸಂತೆ ಮೈದಾನ ರಸ್ತೆ, ಹೊರಪೇಟೆ, ಚಿತ್ರದುರ್ಗ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 2 | ನೋಬೆಲ್ ಎಜುಕೇಷನ್ ಅಂಡ್ ವೆಲ್‌ಫೇರ್ ಸೊಸೈಟಿ, ಎಂ.ಹೆಚ್.ರಸ್ತೆ, ಚಿತ್ರದುರ್ಗ ಜಿಲ್ಲೆ. | ನೋಬೆಲ್ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ಎಂ.ಹೆಚ್.ರಸ್ತೆ, ಚಿತ್ರದುರ್ಗ ಜಿಲ್ಲೆ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 3 | ಬದ್ರೀಯ ಎಜುಕೇಷನಲ್ & ಚಾರಿಟಬಲ್ ಸೊಸೈಟಿ(ರಿ), ಆತೂರು, ಕೊಯಿಲ ಅಂಚೆ ದಕ್ಷಿಣ ಕನ್ನಡ ಜಿಲ್ಲೆ. | ಬದ್ರೀಯ ಕಿರಿಯ ಪ್ರಾಥಮಿಕ ಶಾಲೆ, ಪುತ್ತೂರು ತಾಲೂಕ, ಆತೂರು ಕೊಯಿಲ್ ಅಂಚೆ ದಕ್ಷಿಣ ಕನ್ನಡ ಜಿಲ್ಲೆ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 4 | ದಿ ಭಾರತ್ ಸೊಸೈಟಿ, ನಂ.70 ಅರಮನೆ ರಸ್ತೆ, ಬೆಂಗಳೂರು-560 001. | ನೋಟ್ರಡೇಮ್ ಅಕಾಡೆಮಿ, ನೋಟ್ರಡೇಮ್ ನಗರ ಚೂಡಸಂದ್ರ, ಹುಸ್ಕೂರ್ ಅಂಚೆ, ಬೆಂಗಳೂರು. | ಸಿ.ಬಿ.ಎಸ್.ಇ. ಪಠ್ಯಕ್ರಮ | ಕ್ರಿಶ್ಚಿಯನ್ ಮತೀಯ ಅಲ್ಪಸಂಖ್ಯಾತ |
| 5 | ಸಬೀಹಾ ಎಜುಕೇಷನಲ್ ಸೊಸೈಟಿ, ನಂ:121, 15ನೇ ಕ್ರಾಸ್, 6ನೇ ಮೈನ್, ಲಕ್ಕಸಂದ್ರ ಬಡಾವಣೆ, ವಿಲ್ಸನ್‌ಗಾರ್ಡನ್, ಬೆಂಗಳೂರು | ಹೋಲಿ ಕ್ರೆಸೆಂಟ್ ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ನಂ.5, 3ನೇ ಮೈನ್ ಚಿನ್ನಯ್ಯನಪಾಳ್ಯ, ಆಡುಗೋಡಿ ಅಂಚೆ ಬೆಂಗಳೂರು | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 6 | ಅಲ್ ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್ ಮಂಜಾನಡಿ(ರಿ), ಮಡವೂರುನಗರ, ನರಿಂಗಾನ, ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ. | ಅಲ್ ಮದೀನ್ ಕನ್ನಡ ಪ್ರೌಢಶಾಲೆ ನರಿಂಗಾನ ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 7 | ಅಲ್ ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್ ಮಂಜಾನಡಿ(ರಿ), ಮಡವೂರುನಗರ, ನರಿಂಗಾನ ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ. | ಅಲ್ ಮದೀನ್ ಹಿರಿಯ ಪ್ರಾಥಮಿಕ ಶಾಲೆ, ನರಿಂಗಾನ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |

| | | | | |
|---|---|---|---|---|
| 8 | ಅಲ್ ಮದೀನಾ ಇಸ್ಲಾಮಿಕ್ ಕಾಂಪ್ಲೆಕ್ಸ್ ಮಂಜಾನಡಿ(ರಿ), ಮಡವೂರುನಗರ, ನರಿಂಗಾನ, ಬಂಟ್ವಾಳ ತಾಲೂಕು. ದಕ್ಷಿಣ ಕನ್ನಡ ಜಿಲ್ಲೆ. | ಅಲ್ ಮದೀನ್ ಆಂಗ್ಲ ಪ್ರೌಢಶಾಲೆ, ನರಿಂಗಾನ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |
| 9 | ಮಲ್ನಾಡ್ ಎಜುಕೇಷನ್ ಟ್ರಸ್ಟ್, ರಾಜಾಜಿನಗರ ಮೈಸೂರು. | ಮಲ್ನಾಡ್ ಸ್ಕೂಲ್, ನಂ373 ರಾಜಾಜಿನಗರ ಮೈಸೂರು. | ರಾಜ್ಯ ಪಠ್ಯಕ್ರಮ | ಮುಸ್ಲಿಂ ಮತೀಯ ಅಲ್ಪಸಂಖ್ಯಾತ |

ಷರತ್ತುಗಳು:

1.ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೋಂದಣಿ ಕಾಯಿದೆ ಪ್ರಕಾರ ನೋಂದಣಿಯಾಗಿರ ಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಬೇಕು.

2.ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಆಯಾ ಮತೀಯ ಅಲ್ಪಸಂಖ್ಯಾತರ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟಿರಬೇಕು.

3.ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹಾ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಧಾರ್ಮಿಕ ಪ್ರಮಾಣ ಪತ್ರವನ್ನು ಪಡೆದಿರಬೇಕು.

4.ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯಿದೆಯಡಿಯಲ್ಲಿ ಇಲಾಖೆಯಿಂದ ನೋಂದಾಯಿಸಿರಬೇಕು ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು.

5.ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆಗೊಂಡ ಶೈಕ್ಷಣಿಕ ವರ್ಷದಿಂದ ಮೂರು (3) ವರ್ಷಗಳಿಗೊಮ್ಮೆ ನವೀಕರಿಸಲು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು.

6.ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಲ್ಲಿ ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಕನಿಷ್ಠ ಶೇ. 25% ಶೈಕ್ಷಣಿಕ ವರ್ಷದಲ್ಲಿ ದಾಖಲಾಗಿರಬೇಕು.

7.ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶದಲ್ಲಿ ನಮೂದಿಸಿರುವ ಮಾನದಂಡಗಳನ್ನು ಪಾಲಿಸಲು ಬದ್ಧರಾಗಿರಬೇಕು.

8.ಸಂಸ್ಥೆಯು ಪ್ರತಿವರ್ಷ ಜುಲೈ 31ರಲ್ಲಿದಂತೆ ಶಾಲೆಯ ಸಂಪೂರ್ಣ ಶೈಕ್ಷಣಿಕ ಮಾಹಿತಿಯನ್ನು ಮಕ್ಕಳ ಪ್ರವೇಶ ದಾಖಲಾತಿಯ ಉದ್ಧೃತ ದೃಢೀಕರಣ ಪಟ್ಟಿಯೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮೂಲಕ ಈ ನಿರ್ದೇಶನಾಲಯಕ್ಕೆ ಸಲ್ಲಿಸಲು ಬದ್ಧರಾಗಿರಬೇಕು.

9.ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಕೇಳಿದ ಮಾಹಿತಿ ಒದಗಿಸುವುದು ಮತ್ತು ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದಾಗ ಶಾಲೆಯಲ್ಲಿ ನಿರ್ವಹಿಸುತ್ತಿರುವ ದಾಖಲೆಗಳನ್ನು ತಪಾಸಣೆಗೆ ಒದಗಿಸುವುದು.

"ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಮತೀಯ ಅಲ್ಪಸಂಖ್ಯಾತ ಘೋಷಣ ಪ್ರಮಾಣ ಪತ್ರವನ್ನು ಹಿಂಪಡೆಯಲಾಗುವುದು."

15/X/15

ಕೆ.ಎಸ್. ಸತ್ಯಮೂರ್ತಿ
ಆಯುಕ್ತರು.
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.

13/10

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು (ಮಾಹಿತಿಗಾಗಿ)
2. ನಿರ್ದೇಶಕರು(ಪ್ರಾಥಮಿಕ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
3. ಸಂಬಂಧಿಸಿದ ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಮುಂದಿನ ಕ್ರಮಕ್ಕಾಗಿ ತಿಳಿಸಿದೆ.
4. ಸಂಬಂಧಿಸಿದ ಶಾಲಾ ಮುಖ್ಯಸ್ಥರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ಸಂಬಂಧಿಸಿದ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಸೂಕ್ತಕ್ರಮಕ್ಕಾಗಿ.
6. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರ ಸೂಕ್ತ ಕ್ರಮಕ್ಕಾಗಿ.